Sri M. PALANIYAPPAN.—While observing this Prohibition Week, will Government consider the idea of shifting toddy shops outside the City limits and thereby indirectly help the Prohibition Week ?

Sri T. CHANNIAH.—We will consider.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಪಾನ ನಿರೋಧ ಜಾರಿಯಲ್ಲಿರುವ ಕಡೆ ಕಳ್ಳಬಟ್ಟಿ ಇಳಿಸುವುದು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಪೋಲೀಸಿನವರೇ ಆ ಕೆಲಸ ಮಾಡುವುದು ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಪಾನ ನಿರೋಧವನ್ನು ಜಾರಿಗೆ ತರಲು ಮಾನವರಿಗೆ ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯ. ನೀವೇನು ಹೇಳುತ್ತೀರಿ ?

(ಉತ್ತರವಿಲ್ಲ)

Health Centre in Devanahalli and Bangalore North Taluk.

Q.—217. Sri K. V. BYRE GOWDA (Bangalore North).—

Will the Government be pleased to state :—

whether they are starting Health Centres in Devanahalli and Bangalore North Taluks ?

A.—Sri T. CHANNIAH (Minister for Public Health and Local Self-Government).—

Proposals for the formation of Health Units in Bangalore North Taluk are under examination.

The question of starting Health Centres in Devanahalli Taluk will be taken up for examination in the order of priority in due course.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರಿನ ಬೆಲ್ಟ್ ಏರಿಯಾ ಮತ್ತು ಸ್ಯಾಂಕಿ ರಸ್ತೆ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡ.—ಯಾವಾಗ ? ಪ್ರತಿ ವರ್ಷವೂ ಅಲ್ಲಿ ಮಲೇರಿಯಾ ರೋಗವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನು ಅರಿತೇ ಈಗ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಹೆಲ್ತ್ ಸೆಂಟರನ್ನು ಸ್ಥಾಪಿಸಬೇಕೆಂಬುದನ್ನು ಪರಿಶೀಲನೆ ಮಾಡುತ್ತಿರುವುದು.

Prohibition in Tiptur Taluk.

Q.—258. Sri T. G. THIMME GOWDA (Tiptur).—

Will the Government be pleased to state :—

(*a*) whether it is a fact that tapping has been permitted in Tiptur Taluk in more than one place ;

(*b*) whether prohibition is in force in Tiptur ;

(*c*) whether it has come to their notice that illicit sale of liquor is very much on the increase in Tiptur and surrounding areas, on account of the permission accorded to tap toddy in the area ;

(*d*) whether it is a fact that assurances have been given by the Government more than once to issue order for the discontinuance of this practice of tapping in prohibited areas ?

(*e*) whether Government propose to issue orders forthwith in this regard and prevent illicit sale and consumption of liquor ?

A.—Sri T. CHANNIAH (Minister for Public Health and Local Self-Government).—

(*a*) No.
(*b*) Yes.
(*c*) No.
(*d*) and (*e*) Yes.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕಿನಲ್ಲಿ ಮೂರು ನಾಲ್ಕು ಮೈಲಿ ಪ್ರದೇಶದಲ್ಲಿ ಹೆಂಡ ಮನ್ನೆಳಿಸುವುದಕ್ಕೆ ಅವಕಾಶಕೊಟ್ಟಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲವೆಂದು ಉತ್ತರ ಕೊಟ್ಟಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕು ಬಾರ್ಡರಿನಲ್ಲಿ ಹೆಂಡ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ, ಆ ತರಹ ಮಾರುತ್ತಿರುವುದು ಗೊತ್ತಾದರೆ ತಡೆಗಟ್ಟುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಕಳ್ಳತನದಲ್ಲಿ ಹೆಂಡ ಮಾರಾಟವಾಗುತ್ತಿರುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆ ತರಹ ಇದ್ದರೆ ತನಿಖೆ ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ ಐದು ಮೈಲಿಗಳಾಚೆ ದೂರದಲ್ಲಿ ಅಂಗಡಿಯಿಲ್ಲದಿರುವಕಡೆ ಬೇರೆ ಅಂಗಡಿಯನ್ನಿಟ್ಟು ಹೆಂಡ ಮಾರಾಟ ಮಾಡಲು ಏರ್ಪಾಡು ಮಾಡಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅಂಥ 50 ಅಂಗಡಿಗಳಲ್ಲಿವೆ. ಅದಕ್ಕೇನು ಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಗಮನಕ್ಕೆ ಬಂದರೆ ಕಾನೂನು ಪ್ರಕಾರ ಏನು ಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ತಿಪಟೂರು ತಾಲ್ಲೂಕಿನಲ್ಲಿ ಮಡಕೆಯಲ್ಲಿ ಹೆಂಡ ತಂದು ಮೊಸರು ಮಾರುತ್ತೇವೆಂದು ಹೇಳಿಕೊಂಡು ಮಾರಾಟ ಮಾಡುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಮಾಡುತ್ತಿರುವುದು ಗೊತ್ತಾದಮೇಲೆ ಪೋಲೀಸು ಇಲಾಖೆಗೆ ದೂರು ಕೊಟ್ಟಿದ್ದೀರಾ ?

State-owned Industries.

Q.—28. **Sri B. N. BORANNA GOWDA** (Belur).—

Will the Government be pleased to state :—

(*a*) the number of State-owned industries in Mysore ;

(*b*) the amount spent in total for these industries ;

(*c*) the income derived by these industries for the year ending 1954 March ;

(*d*) whether there are any State-owned industries working at a loss ;

(*e*) the action taken by Government to improve these industries ?

A.—**Sri H. SIDDAVEERAPPA** (Minister for Home and Industries).—

(*a*) Ten.

(*b*) Rs. 6,83,48,930.

(*c*) Rs. 55,05,011.

(*d*) Mysore Implements Factory, Hassan and Government Dichromate Factory, Belagula, worked at a loss during 1953-54.

(*e*) A scheme for the mechanisation of the Mysore Implements Factory, at a cost of Rs. 10 lakhs, spread over a period of 2 years has been sanctioned and is in the course of implementation. The Government Dichromate Factory has been ordered to be amalgamated with the Mysore Chemicals and Fertilisers, Ltd., Belagula.

ಶ್ರೀ ಕೆ. ಲಕ್ಕಪ್ಪ.—ತಾವು ಮೈಸೂರು ಇಂಪ್ಲಿಮೆಂಟ್ ಫ್ಯಾಕ್ಟರಿಯ ಮೆಷಿನರಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುತ್ತೀರಿ. ಇದನ್ನು ತರಿಸಿಕೊಳ್ಳಲು order place ಮಾಡಿರುತ್ತೀರಾ ?

Sri H. SIDDAVEERAPPA.—Yes, tenders have been called for.

ಶ್ರೀ ಕೆ. ಲಕ್ಕಪ್ಪ.—ಟೆಂಡರುಗಳನ್ನು ಕರೆದು ಎಷ್ಟು ದಿನಗಳಾದವು ?

Sri H. SIDDAVEERAPPA.—Very recently, about a month ago.

ಶ್ರೀ ಕೆ. ಲಕ್ಕಪ್ಪ.—ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಯಿಂದ 1953-54ನೇ ಸಾಲಿನಲ್ಲಿ ಎಷ್ಟು ನಷ್ಟವಾಗಿದೆ ?

Sri H. SIDDAVEERAPPA.—For 1953-54, the loss in the Hassan Implements Factory comes to about Rs. 81,800. . . .

Mr. SPEAKER.—The Hon'ble Minister can furnish the reply afterwards.

ಶ್ರೀ ಕೆ. ಲಕ್ಕಪ್ಪ.—ಈ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವುದು ಮೆಷಿನರಿಗೆ ಮಾತ್ರವೇ ?

Sri H. SIDDAVEERAPPA.—Mostly machinery of improved variety.

ಶ್ರೀ ಕೆ. ಲಕ್ಕಪ್ಪ.—ಈ ವರ್ಷ ಇದಕ್ಕಾಗಿ ಎಷ್ಟು ಖರ್ಚು ಮಾಡಬೇಕೆಂದಿದ್ದೀರಿ ?

Sri H. SIDDAVEERAPPA.—This year I propose spending about Rs. 4 lakhs and odd.

Sri V. MASCARENHAS.—By the so-called mechanization of the factory, is it the sanguine expectation that they will equal the Tatas and the Birlas ?

Sri H. SIDDAVEERAPPA.—We always hope and life is always built on hopes.

Sri V. MASCARENHAS.—Is that hope justified at least in the Minister's mind ?

Sri H. SIDDAVEERAPPA.—I am guided by my technical experts.

Sri V. MASCARENHAS.—Who are those technical experts ?